**ಅಗತ್ಯ ವಸ್ತುಗಳ ಬೆಲೆಯಲ್ಲಿ ಹೆಚ್ಚಳ ಹಾಗೂ ಕೊರತೆ**

485 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಇತ್ತೀಚಿನ ದಿನಗಳಲ್ಲಿ ಸಕ್ಕರೆ ಅಕ್ಕಿ ಕಾಫಿಪುಡಿ ಇತ್ಯಾದಿ ದಿನಬಳಕೆಯ ವಸ್ತುಗಳ ಬೆಲೆ ಹೆಚ್ಚಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ.*

*ಆ) ಇವುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

*ಇ) ಈ ಬೆಲೆಗಳನ್ನು ಕಡಿಮೆ ಮಾಡಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದೆಯೇ.*

*ಈ) ಆದರಿಂದ ಆಗಿರುವ ಪರಿಣಾಮಗಳೇನು?*

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ. ಬಂದಿದೆ.

ಆ. ಇಲ್ಲ.

ಇ. ದಿನಬಳಕೆಯ ಪಡಿತರ ವಸ್ತುಗಳ ಬೆಲೆ ಕಡಿಮೆ ಮಾಡಲು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿಲ್ಲ. ಆದರೆ ರಾಜ್ಯ ಸರ್ಕಾರವು ಈ ದಿಸೆಯಲ್ಲಿ ಹಲವಾರು ಕ್ರಮ ಕೈಗೊಂಡಿದೆ. ಇದೇ ಫೆಭ್ರುವರಿ 1 ರಿಂದ ಕೇಂದ್ರ ಸರ್ಕಾರವು ಪಡಿತರ ಆಹಾರ ಧಾನ್ಯಗಳ ಕೇಂದ್ರ ಮಾರಾಟ ಬೆಲೆಗಳನ್ನು (ಸೆಂಟ್ರಲ್ ಇಸ್ಯೂ ಪ್ರೈಸ್) ಹೆಚ್ಚಿಸಿತು. ಆದರಂತೆ ಸರ್ಕಾರವು ಅಂತಿಮ ಬೆಲೆ ನಿಗದಿಪಡಿಸಿತು. ಸಾಮಾನ್ಯವಾಗಿ ರಾಜ್ಯ ಸರ್ಕಾರವು ತ್ರಿವರ್ಣ ಪಡಿತರ ಚೀಟಿದಾರರಿಗೆ ಸಹಾಯಧನ ನೀಡಿ ಕಡಿಮೆ ಬೆಲೆ ನಿಗದಿ ಮಾಡಿದ್ದರೆ ಈ ಬೆಲೆಯೂ ಹೆಚ್ಚಾಯಿತೆಂದು ಮನವರಿಕೆಯಾಗಿ ತ್ರಿವರ್ಣ ಪಡಿತರ ಚೀಟಿದಾರರಿಗೆ ಪ್ರತಿ ಕೆ.ಜಿ. ಅಕ್ಕಿಗೆ ಇನ್ನೂ ಒಂದು ರೂ. ಹಾಗೂ ಗೋಧಿಗೆ 50 ಪೈಸೆಗಳನ್ನು ಕಡಿಮೆ ಮಾಡಲು ಹೆಚ್ಚಿನ ಸಹಾಯಧನ 42.50 ಕೋಟಿ ರೂ. ಗಳನ್ನು ನೀಡಿ ಒಟ್ಟು ಈ ದಿಸೆಯಲ್ಲಿ 112.50 (70 ಕೋಟಿ ಮತ್ತು 42.50) ಕೋಟಿ ಸಹಾಯಧನ ಒದಗಿಸಲಾಗಿದೆ. ಇದರಿಂದ ತ್ರಿವರ್ಣ ಪಡಿತರ ಚೀಟಿದಾರರು ಒಂದು ಕೆ.ಜಿ. ಅಕ್ಕಿಗೆ ಕೇವಲ ರೂ. 4-45 ಹಾಗೂ ಗೋಧಿಗೆ ರೂ. 2-95 ನೀಡಬೇಕಾಗುತ್ತದೆ. ಅದಲ್ಲದೆ ಮುಕ್ತ ಮಾರುಕಟ್ಟೆ ಬೆಲೆಗಳನ್ನು ನಿಯಂತ್ರಿಸಲು ಅಗತ್ಯವಸ್ತುಗಳ ಅಧಿನಿಯಮದಡಿಯಲ್ಲಿ ಹಲವಾರು ನಿಯಂತ್ರಣ ಆದೇಶಗಳನ್ನು ಕಟ್ಟುನಿಟ್ಟಾಗಿ ಜಾರಿ ತಂದು ಸಂಗ್ರಹಣಾ ಮಿತಿ ಮೀರಿದ ಸಂಗ್ರಹಣೆ ಹಾಗೂ ಕಾಳಸಂತೆಗೆ ಅವಕಾಶಕೊಂಡದಂತೆ ಜಾರಿ ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಿದೆ ಹಾಗೂ ಕ್ರಮ ಕೈಗೊಳ್ಳಲಾಗುತ್ತಿದೆ. ಇದಲ್ಲದೆ ಬೆಂಗಳೂರು ನಗರ ಹಾಗೂ ಜಿಲ್ಲೆಗಳ ಕೇಂದ್ರ ಕಾರ್ಯಸ್ಥಾನದಲ್ಲಿ ಆಹಾರ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳು ಸಗಟು:ಚಿಲ್ಲರೆ ವಿತರಕರ ಸಭೆ ಜರುಗಿಸಿ ಅಗತ್ಯವಸ್ತುಗಳನ್ನು ಸೂಕ್ತ ಬೆಲೆಯಲ್ಲಿ ಮಾರಾಟ ಮಾಡಲು ಮನವರಿಕೆ ಮಾಡಿಕೊಡಲಾಗುತ್ತಿದೆ.

ಈ) ಈ ಮೇಲಿನ ಕ್ರಮಗಳಿಂದಾಗಿ ದಿನಬಳಕೆ ವಸ್ತುಗಳ ಬೆಲೆಗಳು ಮತ್ತಷ್ಟು ಹೆಚ್ಚಾಗದಂತೆ ತಡೆಯಲಾಗುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸಕ್ಕರೆ, ಕಾಫಿಪುಡಿ ಮತ್ತು ಇತರೆ ದಿನಬಳಕೆ ವಸ್ತುಗಳ ಬೆಲೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಹಾಗಾದರೆ ಕೇಂದ್ರ ಸರ್ಕಾರಕ್ಕೆ ಇದರ ಬೆಲೆಗಳನ್ನು ಕಡಿಮೆ ಮಾಡಲಿಕ್ಕೆ ಮನವಿಯನ್ನು ಏಕೆ ಕೊಟ್ಟಿಲ್ಲ ಎಂದು ಮೊದಲನೆಯದಾಗಿ

ಕೇಳುವುದಕ್ಕೆ ಇಷ್ಟಪಡುತ್ತೇನೆ. ಎರಡನೆಯದಾಗಿ, ಕಾಫಿಪುಡಿ ಮತ್ತು ಸಕ್ಕರೆ ಬೆಲೆ ನಿಯಂತ್ರಣ ಮಾಡಲಿಕ್ಕೆ ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು? ಮೂರನೆಯದಾಗಿ, 4 ರೂಪಾಯಿ 45 ಪೈಸೆಗೆ ಒಂದು ಕೆ.ಜಿ. ಅಕ್ಕಿ ಸಿಗುತ್ತದೆ ಎಂದು ಹೇಳುತ್ತಾರೆ ಇದು ತಪ್ಪು ವರದಿ. ಅದಕ್ಕೆ ಬದಲಾಗಿ 5 ರೂಪಾಯಿ 10 ಪೈಸೆಯನ್ನು ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು : ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ಬೆಲೆಗಳನ್ನು ಕಡಿಮೆ ಮಾಡುವಂಥಾದ್ದು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವಂಥ ವಿಷಯವಲ್ಲ. ಇಡೀ ದೇಶಾದ್ಯಂತ ದರಗಳನ್ನು ಗೊತ್ತುಮಾಡುವುದು ಕೇಂದ್ರ ಸರ್ಕಾರದ ಜವಾಬ್ದಾರಿ, ಆದ್ದರಿಂದ ಕೇಂದ್ರ ಸರ್ಕಾರದವರು ರಾಜ್ಯದಲ್ಲಿ ಯಾವ ರೀತಿಯಾಗಿ ಬೆಲೆಗಳನ್ನು ಹತೋಟಿಯಲ್ಲಿ ಇಡಬೇಕು ಎನ್ನುವುದಕ್ಕೆ ಕೆಲವು ಮಾರ್ಗಸೂಚಿಗಳನ್ನು ಕೊಟ್ಟಿದ್ದಾರೆ. ಆ ರೀತಿಯಾಗಿ ನಾವು ಮಾರ್ಗಸೂಚಿಗಳನ್ನು ಅನುಸರಿಸಿ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡು ಬೆಲೆಗಳನ್ನು ಹತೋಟಿಗೆ ತರಲಿಕ್ಕೆ ನಾವೆಲ್ಲಾ ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ಅದಕ್ಕಾಗಿ ಕಳೆದ ಮೂರು ತಿಂಗಳಿನಿಂದ ಅಷ್ಟು ಬೆಲೆಗಳು ಹತೋಟಿಯಲ್ಲಿ ಬರುತ್ತಿದೆ. ಅದರ ಜೊತೆಗೆ ಸಕ್ಕರೆ ಮತ್ತು ಕಾಫಿಪುಡಿ ಬೆಲೆ ಸಲುವಾಗಿ ಕೇಳಿದ್ದೀರಿ, ಕಾಫಿ ಪುಡಿ ನಮ್ಮ ಪಡಿತರ ವಸ್ತುಗಳ ವ್ಯಾಪ್ತಿಯಲ್ಲಿ ಬಾರದಿರುವುದರಿಂದ ಇದರ ಬಗ್ಗೆ ನಾವು ಯಾವುದೇ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ ಮತ್ತು ಸಕ್ಕರೆ ಬೆಲೆಯನ್ನು ಕೇಂದ್ರ ಸರ್ಕಾರವೇ ನಿಗಧಿಪಡಿಸುತ್ತಿರುವುದರಿಂದ ಆ ದರವನ್ನು ಕೂಡ ಕೇಂದ್ರ ಸರ್ಕಾರವೇ ನಿಗಧಿ ಮಾಡಿದ ದರದಲ್ಲಿ ಮಾರಾಟ ಮಾಡುವಂಥದ್ದು ಎಂದು ನಮ್ಮ ಸರ್ಕಾರ ಎಲ್ಲಾ ವ್ಯಾಪಾರಸ್ಥರಿಗೆ ತಿಳಿಸಿದ್ದೂ ಆಗಿದೆ. ಅದರಲ್ಲಿ ಏನಾದರೂ ಹೆಚ್ಚಿಗೆ ಮಾರುವಂಥ ನಿದರ್ಶನಗಳು ಸರ್ಕಾರದ ಗಮನಕ್ಕೆ ಬಂದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ತಾವು ಹೇಳಿದ ಬೆಲೆಯಲ್ಲಿ ಮಾರಾಟವಾಗದ ರೀತಿಯಲ್ಲಿ ನೀಡಲಿಕ್ಕೆ ಪ್ರಯತ್ನ ಪಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಪಡಿತರ ಚೀಟಿಯಲ್ಲಿ 4 ರೂಪಾಯಿ 45 ಪೈಸೆಗೆ ತಾವೇನು ಮಾರುತ್ತೀದ್ದೇವೆ ಎಂದು ಹೇಳುತ್ತಿದ್ದೀರಿ, ಅದು ತಪ್ಪು ವರದಿ. ಇಡೀ ರಾಜ್ಯದಲ್ಲಿ 5 ರೂಪಾಯಿ 10 ಪೈಸೆಗೆ ಮಾರುತ್ತಿದ್ದಾರೆ. ಯಾವ ಅಂಗಡಿಗೆ ಬೇಕಾದರೂ ಹೋಗಿ ನೋಡಿ, ನೀವು ತ್ರಿವರ್ಣ ಕಾರ್ಡುಗಳನ್ನು ಕೊಟ್ಟಿದ್ದೀರಿ, ಇದು ಒಂದು. ಎರಡನೆಯದಾಗಿ ಈ ಕಾಫಿಪುಡಿ ಬೆಲೆ ಮತ್ತು ಸಕ್ಕರೆ ಬೆಲೆಯನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡುವುದಕ್ಕೆ ನಿಮಗೇನು ತೊಂದರೆ? ಈಗ ಕಾಫಿ ಬೋರ್ಡಿನವರು ನಾವು ಕಾಫಿಯನ್ನು ಓಪನ್ ಮಾರ್ಕೆಟ್ಟಿಗೆ ಎಫ್‌ಪಿಡಿ ಮೂಲಕ ಕೊಡಲಿಕ್ಕೆ ತಯಾರಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. What is the action the State Government has initiated so far?

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು : ಮಾನ್ಯ ಅಧ್ಯಕ್ಷರೆ, ಕಾಫಿಪುಡಿ ನಮ್ಮ ಎಸೆನ್‌ಷಿಯಲ್ ಕಮಾಡಿಟೀಸ್ ನಿಯಂತ್ರಣ ಏನಿದೆ ಇದರಲ್ಲಿ ಈ ನಿಯಮದಲ್ಲಿ ಬಾರದಿರುವುದರಿಂದ ಕಾಫಿಪುಡಿ ಬಗ್ಗೆ ನಾವು ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ, ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಆದರೆ ಸಕ್ಕರೆ ವಿಷಯವಾಗಿ ನಾವು ಕೇಂದ್ರ ಸರ್ಕಾರಕ್ಕೆ ಕೇಳುತ್ತಿದ್ದೇವೆ. ಕೇಂದ್ರ ಸರ್ಕಾರದವರು ಯಾವ ರೀತಿ ಒಂದು ದರವನ್ನು ನಿಗಧಿಪಡಿಸಿ ಕೊಡುತ್ತಾರೆ. ಆ ರೀತಿ ಕೊಡುತ್ತಿದ್ದೇವೆ. ತಾವು ಹೇಳಿದ ಹಾಗೆ 4 ರೂಪಾಯಿ 45 ಪೈಸೆಗೆ ಮಾರಾಟ ಮಾಡುತ್ತಿಲ್ಲ. ಇದು ಸುಳ್ಳು ಎಂದು ಹೇಳತಕ್ಕಂಥದ್ದು ನಂಬುವುದಕ್ಕೆ ಕಷ್ಟ. ಆ ತರಹ ನಿಮಗೆ ಯಾವ ಸ್ಥಳದಲ್ಲಿ ಮಾರಾಟವಾಗುತ್ತಿದೆ ಎಂದು ತಿಳಿಸಿದರೆ ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಏನಾಗಿದೆ ಮಾನ್ಯ ಅಧ್ಯಕ್ಷರೆ, ಇವರು ಕೊಡುತ್ತಿರುವಂಥ ಅಕ್ಕಿಯನ್ನು ಜನ ತೆಗೆದುಕೊಳ್ಳುತ್ತಿಲ್ಲ ಅದು ಬೇರೆ ವಿಚಾರ. ಇಲ್ಲಿ ಪ್ರಶ್ನೆ ಇರತಕ್ಕಂಥಾದ್ದು ಎಲ್ಲಾ ಬೆಲೆಗಳು ಜಾಸ್ತಿಯಾಗಿದೆ. ಸಕ್ಕರೆ ಬೆಲೆಯನ್ನು ಕೇಂದ್ರ ಸರ್ಕಾರ ನಿಗಧಿ ಮಾಡುತ್ತದೆ ಎನ್ನುತ್ತೀರಿ ನೀವು ಬರೀ ವಿಜೆನ್ಸಿಯೇ ಅದನ್ನು ಡಿಸ್ಟ್ರಿಬ್ಯೂಟ್ ಮಾಡುವುದಕ್ಕೆ? ನಮ್ಮಲ್ಲಿ ಸಕ್ಕರೆ ಕಾರ್ಖಾನೆಗಳಿಲ್ಲವೇನು? ಹಾಗಾದರೆ ನಾವೇನು ಅಷ್ಟೊಂದು ಹತಾಷರಾಗಿದ್ದೇವೋ ನಾಳೆ ಪ್ರಧಾನಮಂತ್ರಿಗಳು ಬರುತ್ತಿದ್ದಾರೆ ನೀವು ಸರ್ಕಾರದಿಂದ ಒಂದು ಮೆಮೊರ್ಯಾಂಡಮ್ ಅನ್ನು ಸಬ್‌ಮಿಟ್ ಮಾಡಿ. ಕಾಫಿ ಬೋರ್ಡ್ ನಮ್ಮದೇ ಇದೆ, ಕಾಫಿ ಬೋರ್ಡಿನ ಛೇರ್‌ಮನ್‌ರವರು ಪಿಡಿಎಸ್ ಮೂಲಕ ಕೊಡಲಿಕ್ಕೆ ತಯಾರಿದ್ದೇವೆ ಎಂದು ಹೇಳಿಕೆ ಕೊಟ್ಟಿದ್ದಾರೆ. ನಿಮಗೆ ತೆಗೆದುಕೊಂಡು ಮಾರಾಟ ಮಾಡಲಿಕ್ಕೆ ಏನು ತೊಂದರೆ? ಹೋಗಲಿ ನಾವು ಮಾಡುತ್ತೇವೆ ಎನ್ನತಕ್ಕ ಭರವಸೆಯನ್ನು ಕೊಡುವುದಕ್ಕೂ ಆಗುವುದಿಲ್ಲವೇ? ಇದುವರೆಗೆ ನೀವೇನು ಪ್ರಯತ್ನ ಮಾಡಿದ್ದೀರಿ?

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು : ಅದು ನಮ್ಮ ಸರ್ಕಾರದ ವ್ಯಾಪ್ತಿಯಲ್ಲಿ ಬಂದರೆ ನಾವು ಮಾಡಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕಾಫಿ ಬೆಲೆ ಬಹಳ ಜಾಸ್ತಿಯಾಗಿದೆ. ನೂರು ಗ್ರಾಂ ಕಾಫಿ ಪುಡಿ ಬೆಲೆ 18 ರೂಪಾಯಿ ಆಗಿದೆ. ಕಾಫಿ ಬೋರ್ಡು ನಿಯಂತ್ರಣವನ್ನು ಸಡಿಲ ಮಾಡಿದ ಮೇಲೆ ಕಾಫಿ ಪುಡಿಯ ಬೆಲೆ ಜಾಸ್ತಿಯಾಗಿದೆ. ಕಾಫಿ ಬೋರ್ಡಿನವರು ಹೇಳಿದ್ದಾರೆ. ನಾವು ಪಿಡಿಎಸ್.ಗೂ ಕೊಡುವುದಕ್ಕೆ ತಯಾರಿದ್ದೇವೆಂದು ಹೇಳಿದ್ದಾರೆ. ಎಸೆನ್‌ಷಿಯಲ್ ಕಮಾಡಿಟೀಸ್ ನಮಗೆ ಬರುವುದಿಲ್ಲವೆಂದು ಒಂದೇ ಕಾರಣದಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಸರ್ಕಾರ ಹೇಳಿದರೆ ಜನರು ಏನು ಮಾಡಬೇಕು? ನೀವು ಈ ವಿಷಯದ ಬಗ್ಗೆ ಸ್ವಲ್ಪ ಕ್ರಮ ತೆಗೆದುಕೊಳ್ಳಬೇಕು. ಎಲೆಕ್ಷನ್ ಇಯರ್ ಇರುವುದರಿಂದ ಏನಾದರೂ ಮಾಡಿ ನಾಳೆ ಪ್ರಧಾನ ಮಂತ್ರಿಗಳು ಬರುತ್ತಿದ್ದಾರೆ. 4.45ಕ್ಕೆ ಮಾರುತ್ತಿದ್ದೇವೆಂದು ಹೇಳುತ್ತಿದ್ದಾರೆ. ಪ್ರಧಾನ ಮಂತ್ರಿಗಳಿಗೆ ಮೆಮೋರ್ಯಾಂಡಂ ಆದರೂ ಸಬ್‌ಮಿಟ್ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಪ್ರತ್ಯೇಕವಾಗಿ ಮೆಮೋರ್ಯಾಂಡಂ ಅನ್ನು ಸಬ್‌ಮಿಟ್ ಮಾಡುತ್ತಿದ್ದೇವೆ. ಎರಡನೆಯದಾಗಿ, ಪಿಡಿಎಸ್. ಸಿಸ್ಟಂನಲ್ಲಿ ನಾವು ಎಲ್ಲಾ ಐಟಂಗಳನ್ನು ಅಂದರೆ ಅದರಲ್ಲಿ ಕಾಫಿ ಬರಬಹುದು, ಇನ್ನೊಂದು ಐಟಂ ಬರಬಹುದು. ಅದನ್ನು ಸ್ವಲ್ಪ ವ್ಯವಸ್ಥೆಯಿಂದ ಸರಬರಾಜು ಮಾಡುವುದಕ್ಕೆ ಸಮಸ್ಯೆ ಇತ್ತು. ಆ ಸಮಸ್ಯೆ ಹೀಗೇ ಉಳಿದರೆ ನಾವು ಸರ್ಕಾರ ಮಧ್ಯೆ ಪ್ರವೇಶಿಸಬೇಕಾಗುತ್ತದೆ. ಆಗ ಕಾಫಿ ಬೋರ್ಡ್ ಜೊತೆಗೆ ಸಮಾಲೋಚನೆ ಮಾಡಿ ಏನು ಮಾಡಬೇಕು ಅದನ್ನು ಮಾಡೋಣ.

ಅಧ್ಯಕ್ಷರು : ಬೈರೇಗೌಡರೇ, ತಮ್ಮ ಪ್ರಶ್ನೆ 363 ಮಾನ್ಯ ಸಚಿವರು ಕಾಲಾವಕಾಶ ಕೇಳಿದ್ದಾರೆ.

**ಬೆಳಗಾಂ ನಗರ ಮತ್ತು ತಾಲ್ಲೂಕಿನಲ್ಲಿ ಬಸ್ಸುಗಳು ಕಡಿಮೆ ಇರುವ ಬಗ್ಗೆ**

488 - ಶ್ರೀ ಬಿ.ಐ. ಪಾಟೀಲ್ (ಉಚ್ಚಗಾಂವ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬೆಳಗಾವಿ ನಗರ ಸಾರಿಗೆ ಘಟಕದಲ್ಲಿ ವಾಹನಗಳ ಕೊರತೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಬೆಳಗಾವಿ ನಗರ ಮತ್ತು ತಾಲ್ಲೂಕಿನಲ್ಲಿ ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ವಾಹನ ಕೊರತೆಯಿಂದಾಗಿ ಅನಾನುಕೂಲವಾಗುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?*